## ಅನಿಲಾ ಬುಖ್ಖಾರಿ ಅವರ ಕವಿತೆಗಳು

# ಅಪಾಯಕಾರಿ ಆಟ

ಯುದ್ಧವಷ್ಟೇ ಅಲ್ಲ
ಈ ಜಗದಲಿ

ಪೇಮವು
ಅತ್ಯಂತ್ಯ ಅಪಾಯಕಾರಿ ಆಟ

ಇಲ್ಲಿ ಗೆದ್ದವನು
ಸೋತ ಹಾಗೆ

ಸೋತವನು
ಸತ್ತ ಹಾಗೆ

ಸತ್ತವನು?

ಇಲ್ಲ
ಪ್ರಣಯದಲಿ ಯಾರಿಗೂ
ಖಚಿತವಾದ ಸಾವಿಲ್ಲ

ಯಾಕೆಂದರೆ
ಅಮರ ಪ್ರೇಮಿಯನು

ಹಾರುವ ಜುಲುಫೆ
ಕೆರೆಯುವ ಗಡ್ಡ
ಉರಿವ ಸಿಗರೇಟಿನೊಡನೆ
ಸದಾ ನೆನಪಿಸಿಕೊಳ್ಳತ್ತೆ
ಈ ಲೋಕ

ಆದರೆ
ನಮಗೆಲ್ಲಿ ಬಿಡುಗಡೆ?

ಅಡುಗೆ ಮನೆಗಳಿಂದ
ಮಕ್ಕಳು ಮರಿಗಳಿಂದ
ಚಿರ ವಿರಹಿಗಳಿಂದ
ಕಾವ್ಯ ರಸಿಕರಿಂದ!



# ನಾನೊಂದು ಇರುವೆಯಾಗಿದ್ದರೆ...

ಅಕಸ್ಮಾತ್ ನಾನೊಂದು ಇರುವೆ ಆಗಿ ಜನ್ಮತಳೆದಿದ್ದರೆ
ಎಷ್ಟೊಂದು ನಿರಾಳವಾಗಿರುತ್ತಿದ್ದೆ ಅಥವಾ ಒದ್ದಾಡುತ್ತಿದ್ದೆ
ನನ್ನ ದುಪ್ಪಟ್ಟು ಗಾತ್ರದ ಅನ್ನದಗಳನ್ನು ಹೊತ್ತೊಯ್ಯುವಾಗ
ಯಾರನ್ನು ಶಪಿಸುತ್ತಿದ್ದೆ?

ಅಕಸ್ಮಾತ್ ನಾನೊಂದು ಇರುವೆ ಆಗಿದ್ದರೆ
ನಿದ್ದೆ ಸ್ವಪ್ನ ಪ್ರೇಮ ಪಾನೀಯ
ಟ್ರಾಫಿಕ್ ಜಾಮಿನ ಸಮಸ್ಯೆಯಂತೂ
ಖಂಡಿತ ಬಾಧಿಸುತ್ತಿರಲಿಲ್ಲ

ಹೆಣ್ಣೋ ಗಂಡೋ ತೃತೀಯ ಲಿಂಗಿಯೋ ಎಂದು
ಯಾರೂ ನನ್ನ ಅಹಂಕಾರವ
ಸೀಳಿ ಸಿಗಿದು ತೋರಣ ಕಟ್ಟಿ ನೋಡುತ್ತಿರಲಿಲ್ಲ!

ಹೌದು! ನನಗೆ ಹೃದಯವಿರುತ್ತಿರಲಿಲ್ಲ
ಅದಕ್ಕಾಗಿ ನಾನು ಖಂಡಿತ ರೋಧಿಸುತ್ತಿರಲಿಲ್ಲ
ಮತ್ತಿದು ಎಂಥಾ ಸುಂದರ ಕಾವ್ಯ ಕಲ್ಪನೆ
ನಾನೇ ರಾಣಿಯಾಗಿರುತ್ತಿದ್ದೆ ಆದರೆ ರಾಜನಿರುತ್ತಿರಲಿಲ್ಲ

ನಿಜ,ನಾನೊಂದು ಇರುವೆಯಾಗಿದ್ದರೆ..?

ಆಗಿದ್ದರೆ..??

ಸಾವಿನ ಜೊತೆ ಸರಸವಾಡುತ್ತಾ
ಯಾರ್‍ಯಾರದೋ ಅಂಗಾಲಿಗೆ ಕಚಗುಳಿಯಿಡುತ್ತಾ
ಆರಾಮಾಗಿ ತಿರುಗುತ್ತಿದ್ದೆ..!

